(ಪ್ರಾ.ಸಾ. 1 / ಚಾ.ಸಾ.1)

ತಾಃ 05-03-2020 ರಂದು ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಎಂ ಆರ್ ಎನ್ ಆರೋಪಿತರ ಪರ ವಕೀಲರಿಂದ ಃ**

ಈ ಹಿಂದೆ ನವಾಜ್ ಮತ್ತು ಆತನ ಹೆಂಡತಿ 5ನೇ ಆರೋಪಿಯ ಮಧ್ಯೆ ಗಲಾಟೆಗಳನು ನಡೆಯುತ್ತಿದ್ದ ಬಗ್ಗೆ ನಿವಾಗಲೀ ಅಥವಾ ನವಾಜ್ ಆಗಲಿ ಕಂಪ್ಲೆಂಟ್ ಕೊಟ್ಟಿದ್ದೀರಾ ಎಂದರೆ ಇಲ್ಲ ಎಂದು ನುಡಿದಿದ್ದಾರೆ, ನವಾಜ್ ಆಗಲಿ ಆತನ ಹೆಂಡತಿ 5ನೇ ಆರೋಪಿಯಾಗಲಿ ಡಿವೋರ್ಸ್ ಕೇಸ್ ಹಾಕಿದ್ದಾರಾ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ನವಾಜ್ ತಿಂಗಳಿಗೆ ಎಷ್ಟು ಬಾರಿ 5ನೇ ಆರೋಪಿಯ ಮನೆಗೆ ಹೋಗುತ್ತಿದ್ದ ಎಂದು ನಿಮಗೆ ಗೊತ್ತಾ ಎಂದರೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಕ್ಯಾಲನೂರು ಬೆಂಗಳೂರಿನಿಂದ ಸುಮಾರು 50 ರಿಂದ 60ಕಿ.ಮಿ ದೂರದಲ್ಲಿರಬಹುದು, ಸದರಿ ಕ್ಯಾಲನೂರಿನ ತಾಲ್ಲೂಕು ಯಾವುದು ಮತ್ತು ಜಿಲ್ಲೆ ಯಾವುದು ಎನ್ನುವುದು ನನಗೆ ಗೊತ್ತಿಲ್ಲ. ಕ್ಯಾಲನೂರಿನ ತೋಟದಲ್ಲಿ ಒಂದು ಮಷಿನ್ ಮನೆ ಇದೆ. ಸದರಿ ಮಷಿನ್ ಮನೆಗೆ ನನಗೆ ಚೆಕ್ಕು ಬಂದಿ ಗೊತ್ತಿಲ್ಲ, ಆ ತೋಟದಲ್ಲಿ ಬಹಳಷ್ಟು ಜನರು ಓಡಾಡುತ್ತಾರೆ ಎನ್ನುವುದು ಸರಿ. ಅದು ಓಪನ್ ಪ್ಲೇಸ್ ಎಂದರೆ ಹೌದು ಅಕ್ಕಪಕ್ಕದಲ್ಲಿ ಮನೆಗಳು ಇವೆ ಎಂದು ನುಡಿದಿದ್ದಾರೆ, ಪೋಲೀಸರು ಅಕ್ಕ ಪಕ್ಕದ ಮನೆಯವರನ್ನು ಜಮೀನಿನ ಬಳಿ ಕರೆದರಾ ಅಥವಾ ಇಲ್ಲವಾ ಎಂದು ಪ್ರಶ್ನಿಸಲಾಗಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಜಮೀನಿನ ಬಳಿ ರಕ್ತದ ಕಲೆ ಇತ್ತಾ ಎಂದು ಪ್ರಶ್ನಿಸಲಾಗಿ ಇಲ್ಲಾ ಎಂದು ನುಡಿದಿದ್ದಾರೆ. ನೀವು ಕಂಪ್ಲೆಂಟ್ ಕೊಟ್ಟ ನಂತರ ಕುದುರೆ ಮುಖದ ಬಳಿ ಎಷ್ಟು ದಿನದ ನಂತರ ಹೋಗಿದ್ದೀರಾ ಎಂದರೆ ಸುಮಾರು 7-8 ದಿನಗಳ ನಂತರ ಹೋಗಿದ್ದೇನೆ ಎಂದು ನುಡಿದಿದ್ದಾರೆ.

ಮೃತ ದೇಹ ಪೂರ್ತಿ ಕೊಳೆತ್ತಿತ್ತು ಚರ್ಮ ಎಲ್ಲಾ ಹೋಗಿತ್ತು ಎಂದರೆ ಕೂದಲು ಮಾತ್ರ ಇರಲಿಲ್ಲ ಎಂದು ನುಡಿದಿದ್ದಾರೆ. ಲೋಕಲ್ ಪೋಲೀಸರನ್ನು ಕರೆದುಕೊಂಡಿದ್ದರಾ ಎಂದರೆ ಕರೆದುಕೊಂಡಿದ್ದರು, ಒಬ್ಬ ಸಬ್ ಇನ್ಸ್‌ಪೆಕ್ಟರ್ ನಾಲ್ಕು ಜನ ಪೋಲೀಸರು ಇದ್ದರು ಎಂದು ನುಡಿದಿದ್ದಾರೆ. ಹೆಣ ಗುರುತುಹಿಡಿಯುವ ರೀತಿ ಇರಲಿಲ್ಲ ಎಂದರೆ ಹೌದು ಎಂದು ನುಡಿದಿದ್ದಾರೆ.

ನೀವು ಸುಮಾರು 5-10 ನಿಮಿಷ ಸ್ಥಳದಲ್ಲಿದ್ದರಾ ಎಂದರೆ ಸುಮಾರು ಅರ್ಧ ಗಂಟೆ ಇದ್ದೆ ಆದರೆ ನಿಖರವಾದ ಸಮಯ ಹೇಳಲು ಆಗುವುದಿಲ್ಲ ಎಂದು ನುಡಿದಿದ್ದಾರೆ. ನಿಮ್ಮ ಸ್ವಂತ ಗಾಡಿಯಲ್ಲಿ ಸ್ಥಳಕ್ಕೆ ಹೋಗಿದ್ದೀರಾ ಎಂದರೆ ನಾನು ಮತ್ತು ನನ್ನ ಸ್ನೇಹಿತ ಸ್ವಂತ ಗಾಡಿಯಲ್ಲಿ ಹೋಗಿದ್ದೆವು ಎಂದು ನುಡಿದಿದ್ದಾರೆ. ಹೆಣದ ಹತ್ತಿರ ಸುಮಾರು 20 ರಿಂದ 25 ಜನ ಇದ್ದರಾ ಎಂದರೆ ಇರಬಹುದು ಎಂದು ನುಡಿದಿದ್ದಾರೆ. ಪೋಲೀಸರು ನಿಮ್ಮ ಸಹಿ ಪಡೆದುಕೊಂಡಿಲ್ಲ ಎಂದರೆ ನಾನು ಹೆಣ ಗುರುತಿಸಿದ್ದೇನೆ ಆದರೆ ಸಹಿ ಪಡೆದುಕೊಂಡಿರುವ ಬಗ್ಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಪೋಲೀಸರು ಯಾರ ಸಹಿ ತೆಗೆದುಕೊಂಡರು ಎನ್ನುವುದು ನಿಮಗೆ ಗೊತ್ತಿಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿದಿದ್ದಾರೆ.

ನಿ.ಪಿ 3 ರಿಂದ 5ರ ಫೋಟೋಗಳನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿದ್ದೀರಾ ಎಂದರೆ ಆ ಫೋಟೋಗಳು ರಕ್ತ ಬಿದ್ದಿದ್ದ ಸ್ಥಳದ ಫೋಟೋಗಳಾಗಿರುತ್ತವೆ ಅವುಗಳನ್ನು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ನೋಡಿದ್ದೇನೆ ಎಂದು ನುಡಿದಿದ್ದಾರೆ.

ಚಾಕುಗಳ ಮೇಲೆ ರಕ್ತ ಆಗಿದ್ದನ್ನು ನಾನು ನೋಡಿಲ್ಲ. ರಾಡ್‌ಗಳ ಮೇಲೆ ಸಹ ರಕ್ತವನ್ನು ನಾನು ನೋಡಿಲ್ಲ, ಕತ್ತಿ ಮೇಲೆ ರಕ್ತವನ್ನು ನೀವು ನೋಡಿಲ್ಲ ಎಂದರೆ ನೋಡಿಲ್ಲ ಎಂದು ನುಡಿದಿದ್ದಾರೆ. ಆ ದಿನ ನಾನು ಸುಮಾರು 10 ರಿಂದ 15 ಅಡಿ ದೂರದಲ್ಲಿ ನಿಂತಿದ್ದೆ. ಆ ಹೊಲದಲ್ಲಿ ಸುಮಾರು 20 ನಿಮಿಷಕ್ಕಿಂತ ಹೆಚ್ಚು ಸಮಯ ಇದ್ದೆ. ಆದರೆ ಯಾವ ಸಮಯದಿಂದ ಯಾವ ಸಮಯ ಎಂದು ಹೇಳಲು ಆಗುವುದಿಲ್ಲ, ನೀವು ಹೋಗುವುದಕ್ಕಿಂತ ಮುಂಚೆ ಪೋಲೀಸರು ಮತ್ತು ಊರಿನ 25 ರಿಂದ 30 ಜನ ಇದ್ದರು ಎಂದರೆ ಇದ್ದರು ಎಂದು ನುಡಿದಿದ್ದಾರೆ. ನೀವು ನಿಮ್ಮ ಸ್ವಂತ ಗಾಡಿಯಲ್ಲಿ ಹೋಗಿದ್ದಿರಿ ಎಂದರೆ ಹೌದು ಎಂದು

ನುಡಿದಿದ್ದಾರೆ, ನಿಮ್ಮ ಮುಂದೆ ಪೋಲೀಸರು ಬರವಣಿಗೆ ಮಾಡಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಆ ದಿನ ಆರೋಪಿಗಳು ಯಾವುದೇ ರಾಡು, ಕತ್ತಿ, ಚಾಕುಗಳನ್ನು ಮತ್ತು ಪೌಚ್‌ಗಳನ್ನು ಎತ್ತಿಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

ನಿಮ್ಮ ಮಗ ಕ್ಯಾಂಟರ್ ಓಡಿಸುತ್ತಾನೆ ಎಂದರೆ ಹೌದು ಎಂದು ನುಡಿದಿದ್ದಾರೆ. ನಿಮ್ಮ ಮಗ ಬಹಳಷ್ಟು ಜನರ ಬಳಿ ಸಾಲ ಮಾಡಿದ್ದಾನೆ ಎಂದರೆ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ನಿಮ್ಮ ಮಗ ಬಹಳ ಸಾಲ ಮಾಡಿದ್ದರಿಂದ ಆತನಿಗೆ ಬಹಳಷ್ಟು ಶತ್ರುಗಳು ಇದ್ದರು ಎಂದು ನಿಮಗೆ ಗೊತ್ತಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಆರೋಪಿಗಳಿಗೂ ನನ್ನ ಮಗನ ಸಾವಿಗೂ ಯೂವುದೇ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ, ನಿಮ್ಮ ಮಗ ಮತ್ತು 5ನೇ ಆರೋಪಿ ಅನ್ಯೋನ್ಯವಾಗಿದ್ದರು ಅವರ ಮಧ್ಯೆ ಯಾವುದೇ ಜಗಳ ಇರಲಿಲ್ಲ ಎಂದರೆ ಅದರ ಬಗ್ಗೆ ಅವರನ್ನೇ ಕೇಳಬೇಕು ಎಂದು ನುಡಿದಿದ್ದಾರೆ, 1ನೇ ಆರೋಪಿ ಮತ್ತು 5ನೇ ಅರೋಪಿ ಮಧ್ಯೆ ಯಾವುದೇ ಸಂಬಂಧ ಇಲ್ಲ ಎಂದು ನುಡಿದಿದ್ದಾರೆ. ಸಾಕ್ಷಿಗೆ ದನದ ರಕ್ತವಾ, ಕೋಳಿ ರಕ್ತಾ, ಮನುಷ್ಯನ ರಕ್ತವಾ ಎನ್ನುವುದು ನಿಮಗೆ ಗೊತ್ತಾ ಎಂದರೆ ನನ್ನ ಮಗನ ರಕ್ತ ಬಿದ್ದಿತ್ತು ಎಂದು ನುಡಿದಿದ್ದಾರೆ. ನಿಮ್ಮ ಮಗನ ಸಾವು ವೈಯಕ್ತಿಕವಾಗಿ ನೀವು ಕಣ್ಣಿನಿಂದ ನೋಡಿಲ್ಲ ಎಂದರೆ ಸಾವನ್ನು ನೋಡಿಲ್ಲ ಎಂದು ನುಡಿದಿದ್ದಾರೆ. ನೀವು ಮತ್ತು ಪೋಲೀಸರು ಸೇರಿಕೊಂಡು ಆರೋಪಿಗಳ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಿದ್ದೀರಾ ಎಂದರೆ ಸುಳ್ಳು ಎಂದು ನುಡಿದಿದ್ದಾರೆ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಜೆ.ವಿ ವಿಜಯಾನಂದ)
9ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.